

ಅರುಣ ಪಿ. ಭಟ್ಟ

## ವಾರಭವಿಷ್ಯ: 15.4.2021ರಿಂದ 21.4.2021ರವರೆಗೆ




ಕುಟುಂಬ ಬಗ್ಗೆ ಹೆಮ್ಮೆ ಪಡುವಂತಹ ಬೆಳವಣಿಗೆ ಆಗುತ್ತದೆ. ವಾರದ ಶುರುವಿನಿಂದಲೇ ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಹಲವು ಕೆಲಸ ಕಾರ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ನಿಮಗೆ ಸಂತುಷ್ಟವಾಗುತ್ತದೆ. ಇ ಪ್ರಮುಖವಾದ ತೀರ್ಮಾನವೊಂದನ್ನು ಕೈಗೊಳ್ಳಲಿದ್ದೀರಿ. ಶುಭದಿನ 18. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಶುಭ ಕಾರ್ಯವನ್ನು ಆಯೋಜಿಸುವ ಸಾಧ್ಯತೆ ಇದೆ. ಈ ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಹಿರಿಯ ಅಧಿಕಾರಿಗಳು, ಸಹೋದ್ಯೋಗಿಗಳ ಜತೆಗೆ ನಿಮ್ಮ ಬಾಂಧವ್ಯ ಗಟ್ಟಿ ಆಗಲಿದೆ. ಬಾಕಿ ಇರುವ ಹಲವು ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ನಿಮ್ಮ ಪೋಷಕರ ಸಂತೋಷಕ್ಕೆ ನೀವು ಕಾರಣರಾಗುತ್ತೀರಿ. ಶುಭದಿನ 19. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರೋಗ್ಯ ಸುಧಾರಿಸುವುದು. ಅಕಸ್ಮಾತ್ ಖರ್ಚು ಸಂಭವ. ಆಸ್ತಿ ಖರಿದಿ ಬಗ್ಗೆ ಚಿಂತನೆ ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರ ರಾಜಕೀಯದ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು.ವೃತ್ತಿ ವ್ಯವಹಾರದಲ್ಲಿ ಲಾಭ ವ್ಯಾವಹಾರಿಕ ಅನುಕೂಲತೆ. ಸರಕಾರಿ ಕೆಲಸ ಶೀಘ್ರ ಆಗುವುದು. ತಂದೆ ತಾಯಿಯವರ ಆರೋಗ್ಯ ಸುಧಾರಣೆ. ಶುಭದಿನ 21. ಚಂಡಿ ಪಾರಾಯಣ ಮಾಡಿರಿ.




ನವೋಲ್ಲಾಸ ಬರುವುದು. ಧರ್ಮ ದಾನಕ್ಕಾಗಿ ಖರ್ಚು. ಮಿತ್ರರಿಗೆ ಸಹಾಯ. ವ್ಯಾಪಾರದಲ್ಲಿ ಅಧಿಕ ಲಾಭ ಹಳೆಯ ಮಿತ್ರರ ಆಗಮನ. ಹಲವು ದಿನಗಳ ಸಮಸ್ಯೆ ಬಗೆಹರೆಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮ. ಮಕ್ಕಳಿಂದ ಶುಭವಾರ್ತೆ ಸಿಗಲಿದೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರರ ಸಹಾಯ ನಿಮಗೆ ಒಲಿದು ಬರಲಿದೆ. ಶುಭದಿನ 20. ಶಿವ ಕವಚ ಓದಿರಿ.




ಕುಟುಂಬ ಸದಸ್ಯರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಇದೇ ವೇಳೆ ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಅವುಗಳನ್ನು ತುಂಬ ಶ್ರದ್ಧೆಯಿಂದ ಅವರು ಮಾಡಿ ಮುಗಿಸುತ್ತಾರೆ. ಈ ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಭೂ ವ್ಯಾಜ್ಯವೊಂಕ್ಕೆ ಶ್ರಮ ಹಾಕಲಿದ್ದೀರಿ. ಶುಭದಿನ 18. ಸೌಂದರ್ಯಲಹರಿ ಪಠಿಸಿರಿ.




ಎಂಜಿನಿಯರ್ ಆದವರಿಗೆ ಹೆಚ್ಚಿನ ಅವಕಾಶಗಳು ಹುಡುಕಿಕೊಂಡು ಬರುತ್ತವೆ. ನಿಮ್ಮ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವು ವ್ಯಕ್ತಿಗಳ ಪರಿಚಯ ಆಗುತ್ತದೆ. ನಿಮ್ಮಲ್ಲಿ ಆಗುತ್ತಿರುವ ಸಕಾರಾತ್ಮಕ ಪರಿಣಾಮ ಅನುಭವಕ್ಕೆ ಬರುತ್ತದೆ. ಸಂಗಾತಿ ಜತೆಗೆ ಇದನ್ನು ಹಂಚಿಕೊಳ್ಳುತ್ತೀರಿ. ಒಟ್ಟಾರೆ ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಆದಾಯ ಹೆಚ್ಚಾಗಲಿದೆ. ಶುಭದಿನ 21. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಈ ವಾರ ವೈಯಕ್ತಿಕ ಹಾಗೂ ವೃತ್ತಿಪರ ಬದುಕಿನಲ್ಲಿ ಲಾಭ ಕಾಣುವ ಯೋಗ ಇದೆ. ಇಂಟರವ್ಯೂಗಳಲ್ಲಿ ಭಾಗವಹಿಸುವವರು ಅನುಕೂಲಕರ ಫಲಿತಾಂಶ ನಿರೀಕ್ಷಿಸಬಹುದು. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಅತ್ಯುತ್ತಮ ಅವಕಾಶಗಳಿವೆ. ಶುಭದಿನ 21. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.




ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧ ಮಾಡಿಕೊಳ್ಳುವುದಕ್ಕೆ ವಾರದ ಶುರುವಿನಲ್ಲಿ ಸಿದ್ಧರಾಗುತ್ತೀರಿ. ಇದರಿಂದ ಹಿರಿಯ ಅಧಿಕಾರಿಗಳು ಬೇಸರಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಶುಭದಿನ 20. ಶ್ರೀ ದುರ್ಗಾಪಾರಾಯಣ ಮಾಡಿರಿ.




ಆಸ್ತಿ ಖರೀದಿಗೆ ಪ್ರಯತ್ನಿಸುತ್ತಿರುವವರು ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಲಂಕಷವಾದ ಪರಿಶೀಲನೆ ನಡೆಸಲಿದ್ದೀರಿ. ದೊಡ್ಡ ಪ್ರಮಾದಗಳನ್ನು ತಡೆಯುವಂತೆ ಸನ್ನಿವೇಶಗಳು ನಿಮಗೆ ಪೂರಕ ಆಗಲಿದೆ. ಆದರೆ ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಾಗಿಲ್ಲ. ಇನ್ನು ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ. ಶುಭದಿನ 17. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಾರದ ಶುರುವಿನಲ್ಲೇ ವ್ಯಾಪಾರ ಉದ್ಯಮದಲ್ಲಿ ಪ್ರಗತಿ ಕಾಣಿಸುತ್ತದೆ. ಇದರಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಪ್ರತಿಷ್ಠಿತ ಸಂಸ್ಥೆಯೊಂದರ ಜತೆಗೆ ಮಹತ್ವದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆಗಳಿವೆ. ವ್ಯಾಪಾರ ಉದ್ಯಮ ವಿಸ್ತರಣೆ ಬಗ್ಗೆ ಮುಖ್ಯವಾದ ತೀರ್ಮಾನವನ್ನು ಕೈಗೊಳ್ಳಲಿದ್ದೀರಿ. ಈ ವಾರ ಆರೋಗ್ಯದಲ್ಲಿ ಯಾವುದೇ ಮುಖ್ಯ ಸಮಸ್ಯೆ ಕಾಡುವುದಿಲ್ಲ. ಶುಭದಿನ 16. ಕಾಲಭೈರವನ ಸೇವೆ ಮಾಡಿರಿ.




ವಾರದ ಶುರುವಿನಲ್ಲಿ ನಿಮ್ಮ ಬಳಿ ಇರುವ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ನೀವು ಹಾಕಿಕೊಂಡ ಗುರಿಯನ್ನು ತಲುಪುವ ಎಲ್ಲ ಸಾಧ್ಯತೆಗಳಿವೆ. ಭೂಮಿ ಖರೀದಿ ಮಾಡುವ ಸಾಧ್ಯತೆಗಳಿವೆ. ಶುಭದಿನ 18. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವಾರದ ಆರಂಭದಲ್ಲಿ ಉನ್ನತ ಶಿಕ್ಷಣಕ್ಕೆ ಯತ್ನಿಸುತ್ತಿರುವವರಿಗೆ ಯಶಸ್ಸು ದೊರೆಯುತ್ತದೆ. ಈ ಅವಧಿಯಲ್ಲಿ ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಬಹಳ ಒತ್ತಡ ಹಾಕಿ ನಿಮ್ಮಿಂದ ಕೆಲಸ ತೆಗೆಸುವ ಯತ್ನಗಳಾಗುತ್ತವೆ. ಉದ್ಯೋಗ ಸ್ಥಳದಲ್ಲಿ ಭಾವನಾತ್ಮಕವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ಕೆಮ್ಮು ನೆಗಡಿ ಕಾಡಬಹುದು. ಶುಭದಿನ 18. ಕನಕಧಾರಾ ಸ್ತೋತ್ರ ಪಠಣಮಾಡಿರಿ